ಅಧ್ಯಕ್ಷರು :- 2003-04ನೇ ಸಾಲಿನ ಪೂರಕ ಅಂದಾಜುಗಳ (ಅಂತಿಮ ಕಂತು) ಸಭೆಯ ಮುಂದೆ ಮಂಡಿಸಲಾಯಿತು.

5. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾವಿಸಲಾದ ವಿಷಯಗಳು

ವಿಷಯ : ಶ್ರೀ ಎಂ.ಎಸ್. ಆತ್ಮಾನಂದಾರವರು ವಿಧಾನಸಭೆಗೆ ಪ್ರವೇಶ ಮಾಡುವ ಪಶ್ಚಿಮ ಗೇಟ್‌ನಲ್ಲಿ ಗುರುತಿನ ಚೀಟಿ ತೋರಿಸಿದರೂ ಪೊಲೀಸರು ಸೌಜನ್ಯವಾಗಿ ನಡೆದುಕೊಳ್ಳದೆ ತಡೆದಿರುವ ಬಗ್ಗೆ.

† ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :- ಮಾನ್ಯ ಅಧ್ಯಕ್ಷರೆ, ಇದು ಕೊನೆಯ ಅಧಿವೇಶನವೆಂದು ನಾವೆಲ್ಲರೂ ತಿಳಿದುಕೊಂಡಿದ್ದೇವೆ. ಇಲ್ಲಿ ಒಂದು ಘಟನೆಯು ನಡೆಯಿತು, ವಿಧಾನಸಭೆಯೊಳಗೆ ಬರುವಾಗ ಶ್ರೀ ಎಂ.ಎಸ್. ಆತ್ಮಾನಂದರವರು ನಮಗೆಲ್ಲರಿಗೂ ಗೊತ್ತಿರುವ ಹಾಗೆ ಹಿರಿಯ ಸದಸ್ಯರಾಗಿದ್ದಾರೆ, ಶ್ರೀಯುತರು 1978ರಲ್ಲಿ ಪ್ರಥಮ ಬಾರಿಗೆ ಶಾಸಕರಾಗಿ ಬಂದವರು, ಮಂತ್ರಿಗಳಾಗಿದ್ದಾರೆ, ಇದು ಅವರು 3ನೇ ಬಾರಿ ಆಯ್ಕೆಯಾಗಿ ಬಂದಿದ್ದಾರೆ. ಅವರು ವಿಧಾನಸಭೆಯೊಳಗೆ ಬರುವಾಗ ಇನ್ನು ವಿಧಾನಸಭೆ ವಿಸರ್ಜನೆಯಾಗಿಲ್ಲ ಸರ್ಕಾರ ಇನ್ನೂ ಇದೆ, ಆತ್ಮಾನಂದರವರು ಆಡಳಿತ ಪಕ್ಷದ ಹಿರಿಯ ಸದಸ್ಯರಾಗಿದ್ದು ಮಾಜಿ ಮಂತ್ರಿಗಳಾಗಿದ್ದವರು, ಅವರನ್ನು ತಡೆಹಿಡಿದು ಕತ್ತಿನ ಪಟ್ಟಿ ಹಿಡಿದು ನಮ್ಮ ಸೆಕ್ಯುರಿಟಿ ಅಧಿಕಾರಿಗಳು ಯಾರಿದ್ದಾರೆ, ಅವರು ನೀವು ಯಾರು? ಏಕೆ ಹೊರಟಿದ್ದೀರಿ ಎಂದು ಹೇಳಿ ಅವರನ್ನು ಪ್ರಶ್ನಿಸಿದರೆ ಇದನ್ನು ನೋಡಿದರೆ ಎಷ್ಟು ದುಃಖವಾಗುತ್ತದೆ. ಇಲ್ಲಿ ಸರ್ಕಾರವಿದೆಯೇ? ಇವರ ಮೇಲೆ ಸರ್ಕಾರದ ಹಿಡಿತವಿದೆಯೇ? ಈ ಸರ್ಕಾರ ಈಗ ಅಂತಿಮ ಹಂತಕ್ಕೆ ಬಂದಿದೆ ಬಹಳ ಸ್ವೇಚ್ಛಾಚಾರದಿಂದ ಪೊಲೀಸರು ನಡೆಯುತ್ತಿದ್ದಾರೆ ಇದಕ್ಕೆ ಕಡಿವಾಣವೇನಾದರೂ ಇದೆಯೇ? ಆಡಳಿತ ಪಕ್ಷದ ಸದಸ್ಯರಿಗೆ ಈ ರೀತಿ ನಡೆದುಕೊಂಡ ಮೇಲೆ ಇನ್ನು ಬೇರೆ ಹೊಸದಾಗಿ ಬಂದಿರತಕ್ಕಂತಹವರಿಗೆ, ಮತ್ತೆ ಬೇರೆ ವಿರೋಧಪಕ್ಷದವರು ಅವರುಗಳ ಗತಿ ಏನು? ಚುನಾವಣೆಯಾಗಿ ಹೊಸದಾಗಿ ಅಧಿವೇಶನ ಪ್ರಾರಂಭವಾಗುತ್ತಿಲ್ಲ. ಈಗಾಗಲೇ ನಾಲ್ಕೈದು ವರ್ಷ ಮುಗಿದು ಕೊನೆಯ ಹಂತದಲ್ಲಿದ್ದೇವೆ. ಶ್ರೀಯುತರವರು ಚಿರಪರಿಚಿತರಾಗಿದ್ದಾರೆ. ಅಧಿವೇಶನ ಇನ್ನು 2-3 ದಿವಸಗಳ ಕಾಲ ನಡೆಯಬಹುದು, ವಿಧಾನಸಭೆ ವಿಸರ್ಜನೆಯಾಗಬಹುದು ಎಂದು ತಿಳಿದುಕೊಂಡು, ಸರ್ಕಾರ ಇರುವುದಿಲ್ಲವೆಂದು ತಿಳಿದುಕೊಂಡು, ಶಾಸಕರ ಸದಸ್ಯತ್ವ ಇರುವುದಿಲ್ಲವೆಂದು ತಿಳಿದುಕೊಂಡು ಇವತ್ತು ಅವರ ಕತ್ತಿನ ಪಟ್ಟಿ ಹಿಡಿದುಕೊಂಡು ನಿಲ್ಲಿಸಿ ನೀವು ಎತಕ್ಕೆ ಹೋಗುತ್ತೀರಿ? ಎಂದು ತಡೆದರೆ ಇಲ್ಲಿ ಸರ್ಕಾರವಿದೆಯೇ ಏನು ಎಂದು ನನಗರ್ಥವಾಗುತ್ತಿಲ್ಲ. ಗೃಹ ಇಲಾಖೆಯವರು ಅವರ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು :- ಮಾನ್ಯ ಸೋಮಶೇಖರ್‌ರವರೆ, ಈಗ ತಾಪು ಹೇಳಿದ್ದೀರಿ, ಆ ವಿಷಯ ನನ್ನ ಗಮನಕ್ಕೆ ಬಂತು. ಕಾರ್ಯದರ್ಶಿಯವರು ಈ ಬಗ್ಗೆ ಸೂಕ್ತಕ್ರಮವನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದಂತಹ ವಿಷಯ, ಶಾಸಕರುಗಳ ಪರಿಸ್ಥಿತಿಯೇ ಹೀಗಾದರೆ ನಾಳೆ ದಿವಸ ಜನಸಾಮಾನ್ಯರ ಪರಿಸ್ಥಿತಿ ಏನಾಗಬಹುದು? ಇದು ಬಹಳ ಗಂಭೀರವಾದುದು. ಶ್ರೀಯುತರವರು

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ನಾಲ್ಕೈದು ವರ್ಷದಿಂದ ಸದನಕ್ಕೆ ಬರುತ್ತಿದ್ದಾರೆ, ಅವರು ಸದನಕ್ಕೆ ಬಂದಾಗಲೂ ಸೆಕ್ಯುರಿಟಿಯವರು ಈ ರೀತಿಯಾಗಿ ನಡೆದುಕೊಳ್ಳುತ್ತಾರೆಂದರೆ ಹೇಗೆ?

ಶ್ರೀ ಬಿ. ಸೋಮಶೇಖರ್ :- ಪೊಲೀಸರ ವರ್ತನೆ ಹೇಗಿದೆ?

ಶ್ರೀ ಜೆಲ್ಲಪ್ ಚಂದ್ರಕಾಂತ್ ಗುರವ್ವ :- ಇದರಿಂದ ಪೊಲೀಸರ ವರ್ತನೆ ಹೇಗಿದೆ ಎಂದು ತಿಳಿಯುತ್ತಿದೆ.

ಅಧ್ಯಕ್ಷರು :- ಮೂರು ಜನರು ಒಟ್ಟಿಗೆ ಮಾತನಾಡುತ್ತೀರಿ ಅದು ಸರಿಯಲ್ಲ, ಈಗ ಮಾನ್ಯ ಸೋಮಶೇಖರರವರು ಮಾತನಾಡುತ್ತಿದ್ದಾರೆ. ನಮ್ಮ ವಾಚ್ ಅಂಡ್ ಒಳಗಡೆಯೇ ವಾರ್ಡ್‌ನವರು ಇಲ್ಲಿ ಸುಸ್ತಮುತ್ತಲು ಇದ್ದಾರೆ. ಅದು ನಡೆದಿರುವುದು ಅಥವಾ ಆಚೆನೋ?

ಶ್ರೀ ಬಿ. ಸೋಮಶೇಖರ್ :- ಇದರ ಬಗ್ಗೆ ಸರ್ಕಾರದವರು ಉತ್ತರವನ್ನು ಕೊಡಲಿ. ನಾನು ನಿಮ್ಮ ಸೆಕ್ಯುರಿಟಿಯ ಬಗ್ಗೆ ಹೇಳುತ್ತಿಲ್ಲ, ಪೊಲೀಸ್ ಸೆಕ್ಯುರಿಟಿ ಬಗ್ಗೆ.

† **ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ)** :- ಮಾನ್ಯ ಅಧ್ಯಕ್ಷರೆ, ನಾನು ಸದನಕ್ಕೆ ಬರತಕ್ಕಂತಹ ಕಾಲದಲ್ಲಿ ನನ್ನ ಮತಕ್ಷೇತ್ರದಿಂದ ಬರತಕ್ಕಂತಹ 4-6 ಜನ ಸಾರ್ವಜನಿಕರು ನನ್ನ ಜೊತೆಯಲ್ಲಿದ್ದರು, ನಮ್ಮ ಜಿಲ್ಲಾ ಮಂತ್ರಿಗಳ ಹತ್ತಿರ ಒಂದು ಸಭೆಯಿತ್ತು, ನಾನು ನಾಲ್ಕೈದು ಜನರನ್ನು ಕರೆದುಕೊಂಡು ಬರುತ್ತಿದ್ದೆ, ಯಾವತ್ತೂ ಕೂಡ ನಾನು ಊರಿನಿಂದ ಜನರನ್ನು ಕರೆದುಕೊಂಡು ಬರುವ ಪರಿಪಾಠ ಇಟ್ಟುಕೊಂಡಿರುವುದಿಲ್ಲ. ನಾನು ಅವರಿಗೆ ಹೇಳಿದೆ ಈ ರೀತಿಯಾಗಿ ಒಂದು ಸಭೆ ಇದೆ, ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಕರೆದಿದ್ದಾರೆ ಎಂದರೆ ಸಭೆಯ ನೋಟೀಸ್ ತೋರಿಸಿ ಎಂದು ಕೇಳಿದರು. ನಾನು ಫೋನ್ ಮುಖಾಂತರ ಮಂತ್ರಿಗಳ ಪತ್ತಿರ ಅಪಾಯಿಂಟ್‌ಮೆಂಟ್ ನಿಗದಿ ಮಾಡಿಕೊಂಡಿದ್ದೇನೆಂದು ನಾನು ಅವರಿಗೆ ಗುರುತಿನ ಚೀಟಿಯನ್ನು ತೋರಿಸಿ, ನಾನು ಸಹ ಸಭೆಗೆ ಹೋಗುತ್ತಿದ್ದೇನೆ ನಾನು ಶಾಸಕ, ಇವರೆಲ್ಲರೂ ನನ್ನ ಒಟ್ಟಿಗೆ ಬಂದಿದ್ದಾರೆ, ಅವರೆಲ್ಲರೂ ಪ್ರಥಮ ಬಾರಿಗೆ ಒಟ್ಟಿಗೆ ಬಂದಿದ್ದಾರೆ, ಅವರೆಲ್ಲರೂ ನಮ್ಮ ಕ್ಷೇತ್ರದವರು ಎಂದು ಅವರಲ್ಲಿ ಪರಿಪರಿಯಾಗಿ ಕೇಳಿಕೊಂಡರೂ ಕೂಡ ಅವರು ನನ್ನ ಮಾತಿಗೆ ಓಗೊಡಲಿಲ್ಲ ಅಧ್ಯಕ್ಷರೆ, ಅವರುಗಳೆಲ್ಲರೂ ನನ್ನ ಸ್ನೇಹಿತರ ಕಾರಿನಲ್ಲಿ ಬಂದಿದ್ದರು, ಆ ವಾಹನದಲ್ಲಿ ಗುರುತಿನ ಚೀಟಿ ಇಲ್ಲ ನನ್ನದು ಗುರುತಿನ ಚೀಟಿ ಇದೆ ನೋಡಿ ಎಂದು ತೋರಿಸಿದರೂ, ಆ ಮಾತನ್ನು ಹೇಳಬಾರದು ಅಧ್ಯಕ್ಷರೆ, ಆ ರೀತಿಯಾಗಿ ಅವರುಗಳು ನಡೆದುಕೊಂಡರು, ಈ ಪರಿಸ್ಥಿತಿ ಯಾರಿಗೂ ಆಗಬಾರದು. ಇಲ್ಲಿಗೆ ಅವರು ಬರುತ್ತಿರುವುದು ಅನಿರೀಕ್ಷಿತವಾಗಿರಬಹುದು, ನಾನು ಸಾರ್ವಜನಿಕ ವಿಚಾರದ ಬಗ್ಗೆ ಮಂತ್ರಿಗಳ ಹತ್ತಿರ ಕರೆದುಕೊಂಡು ಹೋಗುತ್ತಿದ್ದ, ನನ್ನ ಒಟ್ಟಿಗೆ ಇದ್ದ 5-6 ಕಾರುಗಳನ್ನು ಗುರುತಿನ ಚೀಟಿ ಇಲ್ಲದಿದ್ದರೂ ಕೂಡ ಎಂಎಲ್‌ಎ ಎಂದು ಕಾರಿನ ಗಾಜಿನ ಮೇಲೆ ಅಂಟಿಸಿದ್ದರೂ ಕೂಡ ಅಂತಹ ಕಾರುಗಳನ್ನು ಒಳಗಡೆ ಬಿಟ್ಟರು ಅಧ್ಯಕ್ಷರೆ. ಕಾನೂನು ಮಾಡತಕ್ಕಂಥವರು ನಾವು, ಕಾನೂನನ್ನು ಪಾಲಿಸುತ್ತೇವೆ ಎಂದು ಏನೂ ಹೇಳಿದರೂ ಕೂಡ ಬಿಡಲಿಲ್ಲ, ಅವರು ಸೌಜನ್ಯವಾಗಿ ನಡೆದುಕೊಳ್ಳಲಿಲ್ಲ, ಯಾವುದೇ ಒಬ್ಬ ಜನಪ್ರತಿನಿಧಿಯೊಂದಿಗೆ ಅವರು ಸೌಜನ್ಯವಾಗಿ ನಡೆದುಕೊಳ್ಳಬೇಕು ಎನ್ನುವುದು ನನ್ನ ಅಭಿಪ್ರಾಯ. ನಾನು ಹೇಳಿದರೂ, ಗುರುತಿನ ಚೀಟಿ ತೋರಿಸಿದರೂ ಕೂಡ ಅವರು ನನ್ನ ಬಗ್ಗೆ ಸೌಜನ್ಯವಾಗಿ ನಡೆದುಕೊಳ್ಳಲಿಲ್ಲ.

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಮರಿಪ್ರತಿಸಿಲ್ಲ ಎಂದು ಸೂಚಿಸುತ್ತದೆ)

ಅಧ್ಯಕ್ಷರು :- ಮಾನ್ಯ ಗೃಹ ಮಂತ್ರಿಗಳು ದಯವಿಟ್ಟು ಅದರ ಕಡೆ ಸ್ವಲ್ಪ ಗಮನ ಹರಿಸಿ. ಮಾನ್ಯ ಶೆಟ್ಟರ್‌ರವರೂ ಹೇಳಿದ್ದಾರೆ. ಸೋಮಶೇಖರ್‌ರವರೂ ಹೇಳಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ :- ಮೊನ್ನೆ ಒಬ್ಬರು ಲಾಂಚ್‌ಗೆ ಬರಲಿಕ್ಕೆ ಕ್ಯೂ ನಲ್ಲಿ ನಿಂತಿದ್ದಂಥವರಿಗೆ ಕಪಾಳಕ್ಕೆ ಹೊಡೆದು ಓಡಿಸಿಬಿಟ್ಟಿದ್ದಾರೆ ಒಬ್ಬ ಕಾನ್ಸ್‌ಟೇಬಲ್. ಅಲ್ಲಿಗೆ ಸೌಜನ್ಯವಿರುವ ಅಧಿಕಾರಿಗಳನ್ನು ನಿಯುಕ್ತಿ ಮಾಡಬೇಕು.

†ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಸಚಿವರು) :- ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಆತ್ಮಾನಂದರವರನ್ನು ತಡೆಯತಕ್ಕಂಥ ಕೆಲಸವನ್ನು ಉದ್ದೇಶಪೂರ್ವಕವಾಗಿ ಪೊಲೀಸರು ಮಾಡಿದ್ದಾರೆ ಎನ್ನತಕ್ಕಂಥ ಮಾಹಿತಿಯನ್ನು ಅವರು ಕೊಡುತ್ತಿದ್ದಾರೆ. ಹಾಗೆ, ಯಾವುದೇ ಅಧಿಕಾರಿ ಉದ್ದೇಶಪೂರ್ವಕವಾಗಿ ಮಾಡಿದ್ದರೆ, ಅವರ ಮೇಲೆ ಖಂಡಿತವಾಗಿ ಕ್ರಮವನ್ನು ಜರುಗಿಸುತ್ತೇನೆ ಮತ್ತು ಅವರ ವರ್ತನೆಯಿಂದ ಶಾಸಕರ ಮನಸ್ಸಿಗೆ ನೋವಾಗಿದೆ. ಅದಕ್ಕಾಗಿ ನಾನು ಅವರ ಕ್ಷಮೆಯನ್ನು ಕೇಳುತ್ತೇನೆ. ಆದರೆ ಇದೇ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ತಾವು ಹಾಕಿಕೊಟ್ಟಂಥ ಮಾರ್ಗಸೂಚಿಗಳು ಏನಿವೆ, ಅದಕ್ಕನುಸಾರವಾಗಿ ಮತ್ತು ಸೆಕ್ಯುರಿಟಿ ಪರ್ಪಸ್ ವಿಚಾರವಾಗಿ ಎಷ್ಟು ಜನರನ್ನು ಒಳಗೆ ಬಿಡಬೇಕು ಮತ್ತು ಮೀಟಿಂಗ್‌ಗಳಿಗೆ ಯಾವ ರೀತಿಯಾಗಿ ಪಾಸ್ ಅನ್ನು ತೆಗೆದುಕೊಂಡು ಬರಬೇಕು ಅನ್ನತಕ್ಕಂಥ ಕಟ್ಟುನಿಟ್ಟಿನ ಸೂಚನೆಗಳು ಡಿ.ಪಿ.ಎ.ಆರ್. ನಿಂದ ಮತ್ತು ತಮ್ಮಿಂದ ಬಂದಿರುವುದನ್ನು ವಾಯ್‌ಲೇಟ್ ಮಾಡಿ ಏನಾದರೂ ಅಚಾತುರ್ಯ ನಡೆದಿದ್ದರೆ, ಖಂಡಿತವಾಗಿ ಅಂಥ ಅಧಿಕಾರಿಗಳ ಮೇಲೆ ನಾವು ಕ್ರಮವನ್ನು ಜರುಗಿಸುತ್ತೇವೆ. ಆದರೆ ನನ್ನ ಒಂದು ಮನವಿ ಎಂದರೆ, ಕಾನೂನಿನ ಅಡಿಯಲ್ಲಿ ನಾವು ಹಾಕಿಕೊಳ್ಳುವ ನಿಬಂಧನೆಗಳ ಇತಿಮಿತಿಯಲ್ಲಿ ನಾವೂ ಕೂಡ ನಡೆದುಕೊಳ್ಳಬೇಕು ಎನ್ನುವ ವಿನಂತಿಯನ್ನು ನಾನು ಮಾಡುತ್ತೇನೆ. ಈಗ ತಕ್ಷಣ ಸಂಬಂಧಪಟ್ಟ ಡಿ.ಸಿ.ಪಿ. ಯವರನ್ನು ಸಂಪರ್ಕಿಸಿ, ಯಾರು ಇದನ್ನು ಮಾಡಿದ್ದಾರೆ, ಅಲ್ಲಿ ಯಾರು ಇದ್ದರು, ಏಕೆ ಈ ರೀತಿಯಾಗಿ ನಡೆಯಿತು ಎಂದು ಎನ್‌ಕ್ವೈರಿ ಮಾಡಿಸಿ ಸಂಬಂಧಪಟ್ಟವರ ಮೇಲೆ ಕಾನೂನು ಕ್ರಮ ಜರುಗಿಸುತ್ತೇವೆ.

6. ವಿತ್ತೀಯ ಕಾರ್ಯಕಲಾಪಗಳು

ಆಯವ್ಯಯ ಅಂದಾಜುಗಳು, 2004–05 (ಸಾಮಾನ್ಯ ಚರ್ಚೆ)

ಅಧ್ಯಕ್ಷರು :- ಈಗ 2004–05ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಸಾಮಾನ್ಯ ಚರ್ಚೆ ಮೊದಲಿಗೆ, ಮಾನ್ಯ ಜಗದೀಶ್ ಶೆಟ್ಟರ್‌ರವರು

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಮಂಡನೆ ಮಾಡಿರುವ ಈ ಸಾಲಿನ ಬಜೆಟ್ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟಿದ್ದೀರಿ, ಅದಕ್ಕಾಗಿ ಮೊಟ್ಟಮೊದಲು ತಮಗೆ ಧನ್ಯವಾದಗಳನ್ನು ಹೇಳುತ್ತಿದ್ದೇನೆ. ಮುಖ್ಯಮಂತ್ರಿಗಳು ಬಜೆಟ್ ಮಂಡನೆ ಮಾಡುವುದಕ್ಕೆ ಮುಂಚೆ ಕೆಲವು ತಿಂಗಳುಗಳ ಹಿಂದೆ ಹೇಳಿದ್ದರು, ಮುಂದಿನ ಸಲ ಮಂಡಿಸುವ ಬಜೆಟ್ ಚುನಾವಣಾ ಬಜೆಟ್ ಎಂದು ಹೇಳಿದ್ದರು. ಆಗ ನಮ್ಮಲ್ಲಿ ಎಷ್ಟೋ ಪ್ರಶ್ನೆಗಳು ಎದ್ದಿದ್ದವು. ಚುನಾವಣಾ ಬಜೆಟ್ ಎಂದರೆ ಏನಾದರೂ ವಿಶೇಷವಾದ ಬಜೆಟ್ ಇರುತ್ತದೇನೋ ಎಂದು ಎಲ್ಲಾ ಕಡೆ ಚರ್ಚೆಯಾಗಿತ್ತು. ಮೊನ್ನೆ ಅವರು ಮಂಡನೆ ಮಾಡಿದಂಥ ಬಜೆಟ್‌ನ್ನು ನೋಡಿದಾಗ, ಹೌದು, ಅವರು ಕೆಲವು ತಿಂಗಳುಗಳ ಹಿಂದೆ, 'ನಾನು ಈ ಸಲ ಚುನಾವಣಾ

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)